## ತಲಸ್ಪರ್ಶಿ ಲೇಖನ

‘ಪುಟ್ಟಧಾನ್ಯಗಳ ಮಹಾಪಯಣ’ (ಮಾ.16, ಮಲ್ಲಿಕಾರ್ಜುನ ಹೊಸಪಾಳ್ಯ) ಸಿರಿಧಾನ್ಯಗಳ ಕುರಿತ ತಲಸ್ಪರ್ಶಿ ಲೇಖನ. ಲೇಖಕರು ಸಾಕಷ್ಟು ವಿಷಯಗಳನ್ನು ಸಂಗ್ರಹಿಸಿದ್ದಾರೆ. ವೇದಗಳ ಕಾಲ, ಕನ್ನಡ ಕಾವ್ಯಗಳಲ್ಲಿ, ಇತಿಹಾಸಕಾರರು, ಪ್ರಪಂಚ ಪರ್ಯಟನೆಯ ಪ್ರವಾಸಿಗರ ದಾಖಲೆಗಳು, ಜಾನಪದದಲ್ಲಿ ಹಬ್ಬಿರುವ ಸಿರಿಧಾನ್ಯಗಳ ಕುರಿತ ಸಾಕಷ್ಟು ಮಾಹಿತಿಗಳನ್ನು ಲೇಖನದಲ್ಲಿ ನೀಡಲಾಗಿದೆ. ಅಮೂಲ್ಯ ದಾಖಲೆಗಳೊಂದಿಗೆ ಅಪರೂಪದ, ಅಪೂರ್ವ ಲೇಖನ ಇದಾಗಿದೆ. ಸಂಶೋಧನಾತ್ಮಕ ವಿಷಯವಾದರೂ ಲಾಲಿತ್ಯವಾಗಿ ಓದಿಸಿಕೊಂಡು ಹೋಗುವ ಗುಣ ಹೊಂದಿದ ಬರಹವಾಗಿ ಮೆಚ್ಚುಗೆ ಗಳಿಸಿದೆ. ಸಂಶೋಧನಾರ್ಥಿಗಳಿಗೆ ಆಕರವಾಗಿಯೂ ಮೂಡಿಬಂದಿದೆ.

—ಪ್ರೊ. ಕಟಾವೀರನಹಳ್ಳಿ ನಾಗರಾಜ, ಸಿರಾ



## ಸಿರಿಧಾನ್ಯ; ಜನರಲ್ಲಿ ತಿಳಿವಳಿಕೆ ಅಗತ್ಯ

‘ಪುಟ್ಟಧಾನ್ಯಗಳ ಮಹಾಪಯಣ’ ಲೇಖನ ಮಾಹಿತಿಪೂರ್ಣವಾಗಿದೆ. ಸಿರಿ ಧಾನ್ಯಗಳ ಬಳಕೆಯಿಂದ ಆರೋಗ್ಯದ ಸಿರಿ ವೃದ್ಧಿಯಾಗುವುದರಲ್ಲಿ ಎರಡು ಮಾತಿಲ್ಲ. ಪ್ರಸ್ತುತ ಸಿರಿಧಾನ್ಯಗಳನ್ನು ಸಮೃದ್ಧವಾಗಿ ಬೆಳೆಯುವ ಹಾಗೂ ಬಳಕೆ ಮಾಡುವ ಕುರಿತು ಜನರಲ್ಲಿ ಇನ್ನಷ್ಟು ಪರಿಣಾಮಕಾರಿಯಾದ ತಿಳಿವಳಿಕೆ ಅಗತ್ಯವಿದೆ. ಈ ನಿಟ್ಟಿನಲ್ಲಿ ಸರ್ಕಾರದ ಜೊತೆಗೆ ಸಂಘ ಸಂಸ್ಥೆಯವರೂ ಕೈ ಜೋಡಿಸಲು ಮುಂದಾಗಬೇಕಿದೆ.

– ಅರವಿಂದ ಜಿ. ಜೋಷಿ., ಮೈಸೂರು

## ಉಪಯುಕ್ತ ಮಾಹಿತಿ

‘ಪುಟ್ಟ ಧಾನ್ಯಗಳ ಮಹಾಪಯಣ’ ಲೇಖನ ಸಿರಿಧಾನ್ಯಗಳ ಇತಿಹಾಸವನ್ನೇ ತೆರೆದಿಟ್ಟಿದೆ. ಸುಮಾರು ಹತ್ತು ವರ್ಷಗಳಿಂದ ಸಿರಿಧಾನ್ಯಗಳ ಬಗ್ಗೆ ಒಲವು ಮೂಡಿಸಿಕೊಂಡಿರುವ ನಮಗೆ, ನಮ್ಮ ಪೂರ್ವಿಕರು ಬಳಸುತ್ತಿದ್ದ ಈ ಧಾನ್ಯಗಳ ಜಾಗದಲ್ಲಿ ಅಕ್ಕಿ, ಗೋಧಿ ಹೇಗೆ ಪ್ರಸಿದ್ಧಿ ಪಡೆದವು ಎಂದು ಯೋಚಿಸಿದ್ದಕ್ಕೆ ಉತ್ತರ ದೊರೆಯಿತು. ಲೇಖನ ಅದ್ಭುತ, ಮಾಹಿತಿ ಸಂಗ್ರಹಯೋಗ್ಯವಾಗಿದೆ.

—ಅಂಜನಾ ಕೆ.ಎಸ್., ಚಾಮರಾಜನಗರ

## ಸಕಾಲಿಕ ಲೇಖನ

‘ಇಪಿಎಸ್ ಅಡಿ ಹೆಚ್ಚಿನ ಪಿಂಚಣಿ; ಒಳ್ಳೆ ಆಯ್ಕೆಯೇ?’ (ಮಾ.16, ವಿಜಯ್ ಜೋಷಿ) ‘ಕಾಸಿದ್ರೆ ಕೈಲಾಸ’ ಅಂಕಣದಲ್ಲಿ ಮೂಡಿಬಂದ ಈ ಲೇಖನ ಸಕಾಲಿಕವಾಗಿದೆ. ಭವಿಷ್ಯ ನಿಧಿಯ ಪಿಂಚಣಿ ಬಗ್ಗೆ ಉತ್ತಮ ಮಾಹಿತಿಯನ್ನು ಒಳಗೊಂಡಿದೆ. ಆದರೆ ಸೆಪ್ಟೆಂಬರ್ 2014ರ ನಂತರ ನಿವೃತ್ತಿಯಾದವರ ಬಗ್ಗೆಯೂ ಮಾಹಿತಿ ನೀಡಿದ್ದರೆ ಉತ್ತಮವಾಗಿರುತ್ತಿತ್ತು.

—ವೈ. ಸತೀಶಕುಮಾರ, ಬಂಗಾರಪೇಟೆ



## ಕುತೂಹಲಕಾರಿ ಆರಂಭ

ವಿವೇಕಾನಂದ ಕಾಮತ್ ಅವರ ಹೊಸ ಧಾರಾವಾಹಿ ‘ಪದರುಗಳು’ ಆರಂಭ ಬಹಳ ಕುತೂಹಲಕಾರಿಯಾಗಿ ಮೂಡಿಬಂದಿದೆ. ಕಥೆ ಸರಳ ನಿರೂಪಣೆಯೊಂದಿಗೆ ಓದಿಸಿಕೊಂಡು ಹೋಗುತ್ತಿದೆ.

—ಜ್ಯೋತಿ, ಮೈಸೂರು

## ಕಾತರ ಮೂಡಿಸಿದ ಧಾರಾವಾಹಿ

ಹೊಸ ಧಾರಾವಾಹಿ ‘ಪದರುಗಳು’ ಪ್ರಾರಂಭದಲ್ಲಿಯೇ ಕುತೂಹಲ ಮೂಡಿಸಿದೆ. ಮುಂದೇನಾಗುವುದೋ ಎಂದು ಕಾತರದಿಂದ ಕಾಯುವಂತೆ ಮಾಡಿದೆ. ಧಾರಾವಾಹಿ ಇದೇ ಓಘದಲ್ಲಿ ಮುಂದುವರೆಯಲಿ.

—ಸು. ವಿಜಯಲಕ್ಷ್ಮಿ, ಶಿವಮೊಗ್ಗ

## ಚೆಂದದ ನಿರೂಪಣೆ

‘ಬಿಸಿಲು ಬರುವ ಕಾಲಕ್ಕ...’ (ಮಾ.16, ಸ್ವಯಂಪ್ರಭಾ) ‘ಪಾಲನೆ ಪೋಷಣೆ’ ಲೇಖನ ಚಂದದ ನಿರೂಪಣೆಯಿಂದ ಕೂಡಿದೆ. ಮಕ್ಕಳು ರೋಗನಿರೋಧಕ ಶಕ್ತಿ ಬೆಳೆಸಿಕೊಳ್ಳುವುದರ ಜೊತೆಗೆ ಮಾನಸಿಕ ದಾರ್ಢ್ಯವನ್ನು ಬೆಳೆಸಿಕೊಂಡಾಗ ಜೀವನದ ಬಿಸಿಲು, ಮಳೆ, ಚಳಿಗಾಲದ ಯಾವುದೇ ಋತುಮಾನದ ಏರುಪೇರುಗಳನ್ನು ಸಮರ್ಥವಾಗಿ ಎದುರಿಸಲು ಸನ್ನದ್ಧರಾಗುತ್ತಾರೆ ಎಂಬುದನ್ನು ಸುಲಲಿತವಾಗಿ ಲೇಖಕಿ ತಿಳಿಸಿಕೊಟ್ಟಿದ್ದಾರೆ.

—ಸುಮನಾ

## ಉತ್ತಮ ಲೇಖನಗಳ ಗುಚ್ಛ

‘ಸುಧಾ’ ವಾರಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಧಾರಾವರಿ ಲೇಖನಗಳು, ಪ್ರವಾಸ ಕಥನ, ಕಾದಂಬರಿ, ಕಥೆಗಳು ಚೆನ್ನಾಗಿ ಮೂಡಿಬರುತ್ತಿವೆ. ‘ನೀವು ಕೇಳಿದಿರಿ’ ಅಂಕಣ ಹಾಗೂ ವ್ಯಂಗ್ಯಚಿತ್ರಗಳು ಕೂಡ ಚೆನ್ನಾಗಿವೆ.

—ವಿನಾಯಕ ಆರ್. ಅಡ್ಕೋಳಿ, ಕುಮಟಾ

## ಅಪರೂಪದ ಕಲಾವಿದರ ಪರಿಚಯ

‘ಲೀಲಾವತಿ ಅವರ ಮಾತಿಗೆ ಸಿಗರೇಟ್ ಸಹವಾಸ ಬಿಟ್ಟೆ...’ (ಮಾ.16, ಮಂಜುಶ್ರೀ ಎಂ. ಕಡಕೋಳ) ಸಂದರ್ಶನ ಚೆನ್ನಾಗಿದೆ. ಪೋಷಕ ಪಾತ್ರಗಳಿಗೆ ಜೀವ ತುಂಬುವ ಕಲಾವಿದ ಬೆಂಗಳೂರು ನಾಗೇಶ್ ಅವರು ಈ ವಯಸ್ಸಿನಲ್ಲೂ ಸಿನಿಮಾ ರಂಗದಲ್ಲಿ ತಮ್ಮನ್ನು ತಾವು ಉತ್ಸಾಹದಿಂದ ತೊಡಗಿಸಿಕೊಂಡಿರುವುದು ಕಂಡು ಖುಷಿಯಾಯಿತು. ಇಂಥ ಕಲಾವಿದರ ಪರಿಚಯ ಇನ್ನಷ್ಟು ಮೂಡಿಬರಲಿ.

—ಕೃಷ್ಣಕುಮಾರ್, ಚನ್ನರಾಯಪಟ್ಟಣ



## ಸುಂದರ ಚಿತ್ರ-ಲೇಖನ

‘ಬೇಸಿಗೆಗೆ ಬಂದ ನೆಂಟರಿಷ್ಟರು’ (ಮಾ.16, ಎಂ.ಆರ್. ಮಂಜುನಾಥ್) ಲೇಖನ ಹಾಗೂ ಚಿತ್ರಗಳು ಸೊಗಸಾಗಿವೆ. ಬೇಸಿಗೆ ಶುರುವಾಗುತ್ತಿದ್ದಂತೆ ಸಾವಿರಾರು ಮೈಲು ದಾಟಿ ಇಲ್ಲಿಗೆ ಹಕ್ಕಿಗಳು ವಲಸೆ ಬರುತ್ತವೆ ಎಂಬ ವಿಷಯವೇ ಅಚ್ಚರಿ ಹುಟ್ಟಿಸಿತು. ಅವುಗಳ ಜೀವನ ಕ್ರಮ, ನೀರಿನಾಟದ ಚಿತ್ರಗಳು ಕಣ್ಣಿಗೆ ತಂಪೆರೆದವು.

– ಬಿಂದು ಮೂರ್ತಿ, ಬೆಂಗಳೂರು

## ಉಪ್ಪಿಗಿಂತ ರುಚಿ ಇಲ್ಲ, ಆದರೆ...

‘ವೇದಾರಣ್ಯಂ; ಉಪ್ಪೋ ಉಪ್ಪು!’ (ಮಾ.9, ಆನಂದತೀರ್ಥ ಪ್ಯಾಟಿ) ‘ಜೀವನ ಚೈತ್ರ’ ಅಂಕಣದಲ್ಲಿ ಮೂಡಿಬಂದ ಲೇಖನ ಆಸಕ್ತಿಕರವಾಗಿದೆ. ಉಪ್ಪಿಗಿಂತ ರುಚಿ ಇಲ್ಲ ಹೌದು. ಆದರೆ ಉಪ್ಪನ್ನು ತಯಾರಿಸುವ ಕಾರ್ಮಿಕರ ಬದುಕು ಮಾತ್ರ ಕಹಿಯಾಗಿದೆ ಎಂಬುದು ಲೇಖನದಿಂದ ತಿಳಿಯಿತು.

—ಮಹಾವೀರ ಕಾಸರ, ಶಿವಮೊಗ್ಗ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in